7 12 ತಿಂಗಳ ವಸತಿಯುತ ಸೇತುಬಂಧ ಶಾಲೆ

8 ಪೂರಕ ಶಾಲೆ

9 ಟೆಂಟ್ ಶಾಲೆ

10 ಸಂಚಾರಿ ಶಾಲೆ

ಉ) ಅಲೆಮಾರಿ ಜನಾಂಗದ ಮಕ್ಕಳಿಗೆ ಪ್ರತ್ಯೇಕವಾಗಿ ಗಣತಿ ಮಾಡಿರದ ಕಾರಣ ಈ ಮಾಹಿತಿ ಲಭ್ಯವಿರುವುದಿಲ್ಲ ಆದರ ವವಲಸೆ ಎಂಬ ಕಾರಣ ಆಧರಿಸಿ ಮಕ್ಕಳ ಸಮೀಕ್ಷೆ ಮಾಡಿದ್ದು, ಸುಮಾರು 7066 ಮಕ್ಕಳು ವಸಲೆ ಕುಟುಂಬಗಳಲ್ಲಿ ಇರುತ್ತಾರೆ ಎಂದು ತಿಳಿದು ಬಂದಿದೆ ಈ ವಲಸೆ ಬಂದಿರುವ ಮಕ್ಕಳಿಗೆ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ ಮಕ್ಕಳು ವಸಲೆ ಹೋಗುವುದನ್ನು ತಡೆಗಟ್ಟಲು ಮೂಲ ಹಳ್ಳಿಗಳಲ್ಲಿ 6 ಹಾಗೂ 12 ತಿಂಗಳ ವಸತಿಯುತ ಸೇತುಬಂಧ ಶಾಲೆಗಳನ್ನು ತೆರೆಯಲಾಗಿದೆ

54 (116) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಿಗೆ ಎಸ್ ಡಿ ಎಮ್ ಸಿ (ಮೇಲುಸ್ತುವಾರಿ) ರಚನೆ ಮಾಡಲು ಇರುವ ನಿಯಮಾವಳಿಗಳೇನು ,

ಆ) ಈ ಹಿಂದೆ ಇದ್ದ ನಿಯಮಾವಳಿಗಳನ್ನು ಬದಲಾವಣೆ ಮಾಡಲು ಕಾರಣಗಳೇನು,

ಇ) ಬದಲಾದ ನಿಯಮಗಳಿಂದ ಹೆಚ್ಚಿನ ಶಾಲೆಗಳಲ್ಲಿ ಗೊಂದಲಗಳು ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಈ ಎಲ್ಲಾ ತೊಂದರೆಗಳಿಂದ ಶಾಲೆಗಳಲ್ಲಿದ್ದ ಶಿಕ್ಷಕರ ಮೇಲೆ ತೀವ್ರ ಒತ್ತಡ ಬಿದ್ದು ಮಾನಸಿಕ ನೆಮ್ಮದಿ ಕಳೆದುಕೊಂಡು, ಗುಣಮಟ್ಟದ ಶಿಕ್ಷಣ ಕೊಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ಹಾಗಿದ್ದರೆ, ಯಾವ ಸುಧಾರಣಾ ಕ್ರಮ ಜರುಗಿಸಲಾಗುವುದು ,

ಉ) ಈ ಹಿಂದೆ ಇದ್ದ ನಿಯಮಗಳನ್ನು ಜಾರಿ ತರಲು ಪರಿಶೀಲಿಸಲಾಗಿದೆಯೇ , ಹಾಗಿದ್ದರೆ, ಯಾವಾಗ ಜಾರಿ ಮಾಡಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಎಸ್ ಡಿ ಎಂ ಸಿ ರಚನೆ ಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 122 ಪಿಬಿಎಸ್ 2004,

ದಿ 14 06 2006 ರಲ್ಲಿ ಕರ್ನಾಟಕ ಗ್ರಾಮಪಂಚಾಯಿತಿಗಳು (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ಪ್ರಕಾರ ಬೈಲಾಗಳನ್ನು ರಚಿಸಿದೆ

ಆ) ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಪ್ರಾಥಮಿಕ ಶಿಕ್ಷಣವು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವುದರಿಂದ ಮತ್ತು ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಗಳಿಗೂ ಪಂಚಾಯತ್ ರಾಜ್ ವ್ಯವಸ್ಥೆಗೂ ಜೊತೆಗೂಡಿಸುವ ಸಲುವಾಗಿ ಮತ್ತು ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರ ಖಚಿತಪಡಿಸಿಕೊಳ್ಳಲು ಹೆಚ್ಚಿನ ಅನುಕೂಲವಾಗುವಂತೆ ಎಸ್ ಡಿ ಎಂ ಸಿ ಗಳನ್ನು ಗ್ರಾಮಪಂಚಾಯತಿ ವ್ಯಾಪ್ತಿಗೆ ಅಳವಡಿಸಿ ನಿಯಮಾವಳಿಗಳನ್ನು ಬದಲಾವಣೆ ಮಾಡಲಾಗಿದೆ

ಇ) ಗೊಂದಲಗಳು ಉಂಟಾಗಿಲ್ಲ ಆದರೆ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು ಉಚ್ಚ ನ್ಯಾಯಾಲಯವು ದಿ 19 12 2006 ರಂದು ಸರ್ಕಾರದ ಕರ್ನಾಟಕ ಗ್ರಾಮಪಂಚಾಯಿತಿಗಳು (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ಬೈಲಾ ಅಧಿಸೂಚನೆಯನ್ನು ಎತ್ತಿಹಿಡಿದು ತೀರ್ಪು ನೀಡಿದೆ

ಈ) ಈ ಬದಲಾವಣೆಯಿಂದ ಶಿಕ್ಷಕರ ನೆಮ್ಮದಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಉ) ಹಿಂದೆ ಇದ್ದ ನಿಯಮಗಳನ್ನು ಪುನಃ ಜಾರಿಗೆ ತರುವ ಪ್ರಸ್ತಾಪ ಸರ್ಕಾರದ ಮುಂದೆ ಇರುವುದಿಲ್ಲ ಹೊಸ ನಿಯಮಗಳ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯವು ದಿ 19 12 2006 ರಂದು ಆದೇಶ ನೀಡಿದ್ದು, ಸದರಿ ಆದೇಶದನ್ವಯ ಕ್ರಮವಹಿಸಲು ಸೂಚನೆಗಳನ್ನು ನೀಡಲಾಗುತ್ತಿದೆ

61 (109) ಶ್ರೀ ವಿ ಸುನೀಲ್‌ಕುಮಾರ್ (ಕಾರ್ಕಳ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಇರುವ ಸ್ನಾತಕೋತ್ತರ ಕೇಂದ್ರಗಳು ಯಾವುವು ,

ಆ) ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು ಕೇಂದ್ರದಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೇ ,